# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2010-11ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಮೀನುಗಾರಿಕೆ ಇಲಾಖೆಯ ಮೂಲಕ ವೆಚ್ಚ ಮಾಡಲು ನಿಗದಿಪಡಿಸಿದ ಅನುದಾನಕ್ಕೆ ತಯಾರಿಸಲಾದ ಕ್ರಿಯಾ ಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವಿಕೆ.

800/

ಓದಲಾಗಿದೆ:- (1) ಆದೇಶ ಸಂಖ್ಯೆ:ಪಸಂಮೀ/161/ಮೀಇಯೋ/2010 (ಭಾಗ-1) ದಿನಾಂಕ:21-08-2010.

(2) ಆದೇಶ ಸಂಖ್ಯೆ: ಎಫ್‌ಡಿ/58/ಬಿಆರ್‌ಎಸ್/2010 ದಿನಾಂಕ:27-08-2010.

(3) ಪತ್ರ ಸಂಖ್ಯೆ: ಪಂವಾಯೋ/163/2009-10 ದಿನಾಂಕ:30-09-2010.

******

15 NOV 2010

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ 2010-11ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಗೆ ವಿಶೇಷ ಘಟಕ ಯೋಜನೆಯ ಲೆಕ್ಕ ಶೀರ್ಷಿಕೆ 2405-00-789-0-03-422-ವಿಶೇಷ ಘಟಕ ಯೋಜನೆ (ಯೋಜನೆ) ಅಡಿ ಒದಗಿಸಿರುವ ರೂ.527.87 ಲಕ್ಷಗಳ ವೆಚ್ಚದಲ್ಲಿ ಮತ್ತು ಗಿರಿಜನ ಉಪ ಯೋಜನೆಯ ಲೆಕ್ಕ ಶೀರ್ಷಿಕೆ 2405-00-796-0-00-423-ಗಿರಿಜನ ಉಪಯೋಜನೆ (ಯೋಜನೆ) ಅಡಿ ರೂ.210.75 ಲಕ್ಷಗಳ ವೆಚ್ಚದಲ್ಲಿ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗಾಗಿ ಗಿರಿಜನ ಉಪ ಯೋಜನೆಯಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಮಂಜುಗಡ್ಡೆ ಘಟಕಗಳು ಉಪಯೋಗಿಸುವ ವಿದ್ಯುಚ್ಛಕ್ತಿ ಲೆಕ್ಕ ಶೀರ್ಷಿಕೆ 2405-00-800-0-27-ಉಪಶೀರ್ಷಿಕೆ-106-ಸಹಾಯಧನ (ಯೋಜನೆ) ಅಡಿ ಒದಗಿಸಲಾದ ಅನುದಾನದಿಂದ ರೂ.89.00 ಲಕ್ಷಗಳನ್ನು ಪುನರ್‌ವಿನಿಯೋಗ ಮಾಡಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ಮೀನುಗಾರಿಕೆ ನಿರ್ದೇಶಕರು 2010-11ನೇ ಸಾಲಿನ ಗಿರಿಜನ ಉಪ ಯೋಜನೆಯಡಿ ಒಟ್ಟು ರೂ.364.75 ಲಕ್ಷಗಳಿಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ. ಅದರಲ್ಲಿ ರೂ.65.00 ಲಕ್ಷಗಳ ಮೊತ್ತದ ಯೋಜನೆ ಈಗಾಗಲೇ ಮಂಜೂರಾಗಿ ಆಯವ್ಯಯದಲ್ಲಿ ನಮೂದಿಸಿರುವ ಯೋಜನೆಗಳೊಳಗೆ ಬರುತ್ತದೆ. ಪುನರ್‌ವಿನಿಯೋಗ ಮಾಡಲಾದ ರೂ.89.00 ಲಕ್ಷಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಲಾಗಿದ್ದು, ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಪಸಂಮೀ/161/ಮೀಇಯೋ/2010, ಬೆಂಗಳೂರು, ದಿನಾಂಕ:11-11-2010**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, 2010-11ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಗೆ ಮಂಜುಗಡ್ಡೆ ಘಟಕಗಳು ಉಪಯೋಗಿಸುವ ವಿದ್ಯುಚ್ಛಕ್ತಿ ಸಹಾಯಧನ ಯೋಜನೆಯ ಲೆಕ್ಕ ಶೀರ್ಷಿಕೆ 2405-00-800-0-27-ಉಪಶೀರ್ಷಿಕೆ-106-ಸಹಾಯಧನ (ಯೋಜನೆ) ಅಡಿ ಒದಗಿಸಲಾದ ಅನುದಾನದಿಂದ ಗಿರಿಜನ ಉಪ ಯೋಜನೆ ಲೆಕ್ಕ ಶೀರ್ಷಿಕೆ 2405-00-796-0-00-423ಗೆ ಪುನರ್‌ವಿನಿಯೋಗ ಮಾಡಿ ಒದಗಿಸಲಾದ ರೂ.89.00 ಲಕ್ಷ (ಎಂಬತ್ತೊಂಬತ್ತು ಲಕ್ಷ ರೂಪಾಯಿಗಳು ಮಾತ್ರ)ಗಳ ವೆಚ್ಚದಲ್ಲಿ ಈ ಆದೇಶದ **ಅನುಬಂಧ**ದಲ್ಲಿ ನಮೂದಿಸಿರುವ ಗಿರಿಜನ ಉಪ ಯೋಜನೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಡಿ.ಎಂ.ರಾಜಣ್ಣ 11/11
(ಡಿ.ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4 ಮತ್ತು 5)
4) ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರಗಳಿಗೆ (ಮೀನುಗಾರಿಕೆ ನಿರ್ದೇಶಕರ ಮುಖಾಂತರ)
5) ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
7) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8) ಸಂಬಂಧಪಟ್ಟ ಎಲ್ಲಾ ಖಜಾನೆ ಅಧಿಕಾರಿಗಳಿಗೆ (ಮೀನುಗಾರಿಕೆ ನಿರ್ದೇಶಕರ ಮುಖಾಂತರ)
9) ಶಾಖಾ ರಕ್ಷಾ ಕಡತ:ಹೆಚ್ಚಿನ ಪ್ರತಿಗಳು.

ಆದೇಶ ಸಂಖ್ಯೆ:ಪಸಂಮೀ/161/ಮೀಇಯೋ/2010, ಬೆಂಗಳೂರು ದಿನಾಂಕ:11-11-2010ರ

## ಅನುಬಂಧ

## 2010-11 ನೇ ಸಾಲಿನ ಗಿರಿಜನ ಉಪ ಯೋಜನೆಯಡಿ ಕಾರ್ಯಕ್ರಮಗಳು

2010-11 ನೇ ಸಾಲಿನಲ್ಲಿ ಪುನರ್‌ವಿನಿಯೋಗದಿಂದ ಒದಗಿಸಲಾಗುವ ಅನುದಾನದಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಘಟಕ | ಸಂಖ್ಯೆ | ಘಟಕ ವೆಚ್ಚ (ರೂ.ಗಳಲ್ಲಿ) | ಒಟ್ಟು ವೆಚ್ಚ (ರೂ.ಲಕ್ಷ) | ಷರಾ |
|---|---|---|---|---|---|
| 1) | ಕಬಿನಿ ಗಿರಿಜನ ಮೀನುಗಾರರ ತರಬೇತಿ ಕೇಂದ್ರದಲ್ಲಿ ಪ್ರಾತ್ಯಕ್ಷತಾ ಕೊಳಗಳ ನಿರ್ಮಾಣ | 3 ಎಕರೆ | - | 49.00 | ನೀರು ಮತ್ತು ಒಳಚರಂಡಿ ಸೌಲಭ್ಯಗಳೊಂದಿಗೆ ಪ್ರಾತ್ಯಕ್ಷತಾ ಕೊಳಗಳನ್ನು ನಿರ್ಮಿಸಲಾಗುವುದು. |
| 2) | ಮತ್ಸ್ಯಾಶ್ರಯ ಯೋಜನೆಯಡಿ ಪರಿಶಿಷ್ಟ ಪಂಗಡ ಫಲಾನುಭವಿಗೆ ಮನೆಗಳ ನಿರ್ಮಾಣ | 100 | 40,000-00 | 40.00 | ವಸತಿ ರಹಿತ ಫಲಾನುಭವಿಗೆ ರೂ.40,000-00 ವೆಚ್ಚದಲ್ಲಿ ಮನೆ ನಿರ್ಮಿಸಲು ಸಹಾಯ ಒದಗಿಸಲಾಗುವುದು |
| | | | | 89.00 | |

(ಡಿ.ಎಂ.ರಾಜಣ್ಣ) 11/11

ಸರ್ಕಾರದ ಅಧೀನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)